**ದಿನಾಂಕಃ 05-04-2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ ಅದರಲ್ಲಿ ಬರೆದಿರುವ ವಿಷಯಗಳು ನಾನೇ ಹೇಳಿ ಬರೆಸಿದ್ದೇನೆ. ಸದರಿ ಸಂಗತಿಗಳು ಸತ್ಯದಿಂದ ಕೂಡಿರುತ್ತವೆ.

**ಮುಂದೂವರೆದ ಮುಖ್ಯ ವಿಚಾರಣೆ 10 ನೇ ಪ್ರತಿವಾದಿಗಳ ಪರ ಶ್ರೀ ಎ.ಎಸ್.ಕೆ. ವಕೀಲರಿಂದಃ**

ದಾವಾ ಆಸ್ತಿಯ ಪೈಕಿ ಆಸ್ತಿ ಸಂಖ್ಯೆ 702/12 ಎ ಮತ್ತು ಪ್ಲಾಟ್ ನಂ. 55/7 ಇವುಗಳನ್ನು ಅದಲು ಬದಲು ಮಾಡಿಕೊಂಡ ಪತ್ರವನ್ನು ಕೊಟ್ಟಿದ್ದೇನೆ ಅದನ್ನು ನಿ ಡಿ -26 ಎಂದು ಗುರುತಿಸಲಾಯಿತು.

ವಿಪಿಸಿ ನಂ.702/12 ಎ ಇದನ್ನು ನಾನು ಖರೀದಿಸಿದ ಬಗ್ಗೆ ನಾನು ಕ್ರಯ ಪತ್ರ ಕೊಟ್ಟಿದ್ದೇನೆ ಅದನ್ನು ನಿ ಡಿ -27 ಎಂದು ಗುರುತಿಸಲಾಯಿತು.

ನಿ ಡಿ -27 ರಲ್ಲಿ ಖಲೀಲ ಸಾಬ್ ಇತನು ಸಹಿ ಮಾಡಿದ್ದಾನೆ. ಆತನ ಸಹಿಯನ್ನು ಸಾಕ್ಷಿ ಗುರುತಿಸಿದ್ದು ಅದನ್ನು ನಿ ಡಿ -27 ಎ ಎಂದು ಗುರುತಿಸಲಾಯಿತು.

ನಿ ಡಿ -27 ರಲ್ಲಿ ಮಹಮ್ಮದ್ ಗೌಸ್, ಉಮ್ಮಾ ಕುಬ್ರಾ, ಅಬುಸ್ ಅಲಿ ಇವರು ಸಾಕ್ಷಿಯಾಗಿ ಸಹಿ ಮಾಡಿದಾದರೆ ಸಾಕ್ಷಿ ಇವರುಗಳ ಸಹಿಗಳನ್ನು ಗುರುತಿಸಿದ್ದು ನಿ ಡಿ -27 ಬಿ ಯಿಂದ ನಿ ಡಿ 27- ಡಿ ಎಂದು ಗುರುತಿಸಲಾಯಿತು.

ಪತ್ರ ಬರಹಗಾರ ಎಮ್ ಹೆಚ್ ಕುಲಕರ್ಣಿ ಇವರ ಸಹಿಯನ್ನು ಸಾಕ್ಷಿ ಗುರುತಿಸಿದ್ದು ಅದನ್ನು ನಿ ಡಿ -27 ಇ ಎಂದು ಗುರುತಿಸಲಾಯಿತು.

ನಿ ಡಿ -26 ರಲ್ಲಿ ನಾನು, ಸಬಿಯಾ ಸಹಿ ಮಾಡಿದ್ದು ಅವುಗಳನ್ನು ನಿ ಡಿ -26 ಎ ಮತ್ತು ನಿ ಡಿ -26 ಬಿ ಎಂದು ಗುರುತಿಸಲಾಯಿತು.

ಸಾಕ್ಷಿದಾರರಾಗಿ ಅಬು ಸಲಿಯಾ ಮತ್ತು ಚೆನ್ನಪ್ಪ ಇವರ ಸಹಿಗಳನ್ನು ಸಾಕ್ಷಿ ಗುರುತಿಸಿದ್ದು ಅದನ್ನು ನಿ ಡಿ -26 ಸಿ ಮತ್ತು ಡಿ ಎಂದು ಗುರುತಿಸಲಾಯಿತು.

ಪತ್ರ ಬರಹಗಾರ ಎಮ್ ಹೆಚ್ ಕುಲಕರ್ಣಿ ಇವರ ಸಹಿಯನ್ನು ಸಾಕ್ಷಿ ಗುರುತಿಸಿದ್ದು ಅದನ್ನು ನಿ ಡಿ -26 ಇ ಎಂದು ಗುರುತಿಸಲಾಯಿತು.

ವಾದಿಯರ ದಾವೆಯನ್ನು ವಜಾ ಮಾಡಬೇಕೆಂದು ಕೇಳಿಕೊಳುತ್ತೇನೆ.

**ಪಾಟೀ ಸವಾಲುಃ 1 ಮತ್ತು 11 ನೇ ಪ್ರತಿವಾದಿಗಳ ಪರ ಶ್ರೀ ಕೆ.ಜಿ.ಎಫ್ ಮತ್ತು ಎಸ್. ಎ. ಕೆ. ವಕೀಲರು ಹೇಳಿರುತ್ತಾರೆ.**

**ಪಾಟೀ ಸವಾಲುಃ ವಾದಿಗಳ ಪರ ಶ್ರೀ ವೈ.ಹೆಚ್.ಕೆ. ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

Sd/-
(ಜೆ.ವಿ.ಕುಲಕರ್ಣಿ)
1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.